ಮಂಗಳೂರು ತಾಲ್ಲೂಕಿಗೆ ಕೈಗಾರಿಕಾ ರಿಯಾಯಿತಿ

೧೨೪೫. ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ).—ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ತಾಲ್ಲೂಕಿನಲ್ಲಿ ಹೊಸ ಕೈಗಾರಿಕೆ ಪ್ರಾರಂಭ ಮಾಡಲು ಇತ್ತೀಚೆಗೆ ಜನರು ಮುಂದೆ ಬಾರದಿರಲು ಕಾರಣವೇನು ?

ಆ) ಈ ಹಿಂದೆ ಈ ತಾಲ್ಲೂಕಿನ ಜನರಿಗೆ ಕೈಗಾರಿಕೆಗಳನ್ನು ಪ್ರಾರಂಭಿಸಲು ಸಿಗುತಿದ್ದ ಅನುಕೂಲಗಳು ಈಗ ಸಿಗದಿರುವುದು ನಿಜವೇ ?

ಇ) ಈ ಹಿಂದೆ ಸಿಗುತ್ತಿದ್ದ ಅನುಕೂಲತೆಗಳನ್ನು ಪುನಃ ಉರ್ಜಿತಗೊಳಿಸಬೇಕೆಂದು ಜನರು ಕೇಳಿ ಕೊಂಡಿರುವುದಕ್ಕೆ ಸರ್ಕಾರದ ನಿರ್ಧಾರವೇನು ?

ಈ) ಮುಲ್ಕಿಯಲ್ಲಿ ಪ್ರಾರಂಭಿಸಲ್ಪಟ್ಟ ಇಂಡಸ್ಟ್ರೀಯಲ್ ಎಸ್ಟೇಟಿನಲ್ಲಿ ಎಷ್ಟು ಕೈಗಾರಿಕೆಗಳು ಪ್ರಾರಂಭಗೊಂಡಿವೆ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ ಸಚಿವರು).—

ಅ) ಮಂಗಳೂರು ತಾಲ್ಲೂಕಿನಲ್ಲಿ ಹೊಸ ಕೈಗಾರಿಕೆ ಸ್ಥಾಪಿಸಲು ಜನರು ಈಗಲೂ ಸಹ ಮುಂದೆ ಬರುತ್ತಿದ್ದಾರೆ.

ಆ) ಹೌದು.

ಇ) ಸರಕಾರವು ಇಷ್ಟರಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಘೋಷಿಸಲಿದ್ದು ಇದುವರೆವಿಗೂ ಬಂದಿರುವ ಮನವಿಗಳನ್ನು ಗಮನದಲ್ಲಿಟ್ಟುಕೊಂಡು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ಈ) ೪ ಘಟಕಗಳು ಪ್ರಾರಂಭವಾಗಿವೆ.

ಸರ್ಕಾರಿ ನೌಕರರಿಗೆ ನೀಡುವ ಗೃಹಪ್ರವಾಸ ಹಾಗೂ ರಜಾಪ್ರವಾಸ ರಿಯಾಯಿತಿ ಸೌಲಭ್ಯ

೧೨೫೫. ಶ್ರೀ ರಾಮಲಿಂಗಾರೆಡ್ಡಿ (ಜಯನಗರ).—ಮಾನ್ಯ ಹಣಕಾಸು ಮತ್ತು ಸಾಂಖ್ಯಿಕ ಹಣಕಾಸು ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರವು ತನ್ನ ನೌಕರರಿಗೆ ಎಂದಿನಿಂದ ಗೃಹ ಪ್ರವಾಸ ಹಾಗೂ ರಜಾ ಪ್ರವಾಸ (ಹೆಡ್.ಟಿ.ಸಿ. ಮತ್ತು ಎಲ್.ಟಿ.ಸಿ.) ರಿಯಾಯಿತಿ ಸೌಲಭ್ಯ ನೀಡಲಾಗುತ್ತಿದೆ. ಹಾಗೂ ಎಷ್ಟು ವರ್ಷ ಕ್ಕೊಮ್ಮೆ ನೀಡುತ್ತಿದೆ.

ಆ) ದಂಪತಿಗಳಿಬ್ಬರೂ ರಾಜ್ಯ ಸರ್ಕಾರಿ ನೌಕರರಾಗಿದ್ದಲ್ಲಿ ಒಬ್ಬರಿಗೆ ಮಾತ್ರ ಆದರ ಸೌಲಭ್ಯ ನೀಡಲಾಗುತ್ತಿರಲು ಕಾರಣಗಳೇನು ?

ಇ) ಈಗ ನೀಡುತ್ತಿರುವ ಗೃಹ ಪ್ರವಾಸ ರಿಯಾಯಿತಿ ಸೌಲಭ್ಯದಲ್ಲಿ ದಂಪತಿಗಳಲ್ಲೊಬ್ಬರು ತಂದೆ ತಾಯಿಯರನ್ನು ಮಾತ್ರ ನೋಡಲು ಸಾಧ್ಯವಿರುವುದು ನಿಜವಲ್ಲವೆ ?

ಈ) ಹಾಗಿದ್ದಲ್ಲಿ ಸರ್ಕಾರಿ ನೌಕರರಿಬ್ಬರೂ ಅವರವರ ತಂದೆ-ತಾಯಿಗಳನ್ನು ನೋಡಿಕೊಂಡು ಬರಲು ಸಾಧ್ಯವಾಗುವಂತೆ ಈ ಸೌಲಭ್ಯವನ್ನು ಸರ್ಕಾರಿ ನೌಕರಿಯಲ್ಲಿರುವ ಪತಿ ಪತ್ನಿಯರಿಬ್ಬರಿಗೂ ಕಲ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಸಾಂಖ್ಯಿಕ ಹಣಕಾಸು ಸಾಂಖ್ಯಿಕ ಮತ್ತು ಅಬಕಾರಿ ಮಂತ್ರಿಗಳು).—

ಅ) ರಾಜ್ಯ ಸರ್ಕಾರಿ ನೌಕರರಿಗೆ ಸ್ವಗ್ರಾಮ ಪ್ರವಾಸ ಸೌಲಭ್ಯವನ್ನು ೧೯೫೮ ರಿಂದ ನೀಡ ಲಾಗುತ್ತಿದ್ದು ಇದು ಎರಡು ವರ್ಷಗಳ ಒಂದು ಬ್ಲಾಕ್ ಅವಧಿಗೆ ದೊರಕುತ್ತದೆ. ರಜಾ ಪ್ರವಾಸ ರಿಯಾಯಿತಿ ಸೌಲಭ್ಯವನ್ನು ೧೯೭೮ ರಿಂದ ಜಾರಿಗೆ ತಂದಿದೆ. ಈಗಿರುವ ರಜಾ ಪ್ರವಾಸ ರಿಯಾಯಿತಿ ಸೌಲಭ್ಯದ ಯೋಜನೆಯಂತೆ ಸರ್ಕಾರಿ ನೌಕರನು ಇದನ್ನು ತನ್ನ ಸಂಪೂರ್ಣ ಸೇವಾವಧಿಯಲ್ಲಿ ಒಮ್ಮೆ ಮಾತ್ರ ಪಡೆಯಲು ಅವಕಾಶವಿದೆ.